# ಮಹಿಳಾ ವಿಶೇಷ

ಈ ಘಟನೆ ನಡೆದು 15 ವರ್ಷಗಳೇ ಕಳೆದಿವೆ. ಆದರೂ ಆ ದಿನ ಬಂದು ನನ್ನನ್ನು ಕಂಡ ಸ್ಮಿತಾ ಎಂಬ ಚಂದದ ಒಬ್ಬ ಯುವ ಮಹಿಳೆ, ಅವಳ ತೇವವಾಗಿದ್ದ ಕಂಗಳು ಹೇಳಲು ಪ್ರಯತ್ನಿಸುತ್ತಿದ್ದ ಮಾತು, ಆಕೆಯ ಮುಖದಲ್ಲಿದ್ದ ಭಾವ, ಮರೆಯಲಾಗದಂತೆ ನನ್ನ ಮನಸ್ಸಿನಲ್ಲೇ ಉಳಿದುಹೋಗಿವೆ.

ಸ್ಮಿತಾ ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ. ತಿಂಗಳಿಗೆ ಸುಮಾರು ಒಂದು ಲಕ್ಷ ರೂಪಾಯಿ ದುಡಿಯುತ್ತಿದ್ದ ಅವಳು, ಆಗಷ್ಟೇ ಮದುವೆಯಾಗಿದ್ದವಳು. 'ನನ್ನ ಗಂಡನಿಗೆ ಸ್ವಲ್ಪ ಮುಂಗೋಪ' ಎಂದು ಮಾತು ಪ್ರಾರಂಭಿಸಿದ ಆಕೆ, ಏನೋ ಹೇಳುತ್ತಾ ತನ್ನ ಬಟ್ಟೆಯನ್ನು ಭುಜದಿಂದ ಸ್ವಲ್ಪವೇ ಜಾರಿಸಿ ಬೆನ್ನಿನ ಮೇಲ್ಭಾಗವನ್ನು ತೋರಿಸಿದಳು. ಅಲ್ಲಿ ನೋಡಿ ನನಗೆ ಸಂಕಟವಾಗಿ ಹೊಟ್ಟೆಯೆಲ್ಲ ತೊಳಸಿದಂತಾಯಿತು. ಅವಳ ಬೆನ್ನಲ್ಲಿ ಐದಾರು ಕಡೆ ಸಿಗರೇಟ್‌ನಿಂದ ಸುಟ್ಟ ಗಾಯವಿತ್ತು.

'ನನಗೆ ಡಿವೋರ್ಸ್ ಬೇಡ, ಅವನು ಹೀಗೆ ಮಾಡುವುದನ್ನು ನಿಲ್ಲಿಸಿದರೆ ಸಾಕು' ಎಂದಳು ಸ್ಮಿತಾ, ಹಿಂಸೆಗೆ ಪರಿಹಾರ ಸೂಚಿಸುವಂತೆ ನನ್ನೆಡೆಗೆ ನೋಡುತ್ತಾ. 'ಸುಶಿಕ್ಷಿತಳಾದ, ನೋಡಲು ಲಕ್ಷಣವಾಗಿದ್ದ, ಚಿಕ್ಕ ವಯಸ್ಸಿನ ಈ ಮಹಿಳೆ, ಇಷ್ಟು ಹಿಂಸೆ ಮಾಡುತ್ತಿದ್ದ ಗಂಡನಿಂದ ಡಿವೋರ್ಸ್ ಬೇಡ ಎನ್ನುವುದು ಯಾಕೆ?' ಎನ್ನುವುದು ಇಂದಿಗೂ ನನಗೆ ಪೂರ್ತಿ ಅರ್ಥವಾಗದ ವಿಷಯ. ಬೇಕಾದಂತೆ ತನ್ನ ಜೀವನ ಕಟ್ಟಿಕೊಳ್ಳಲು ಆಕೆಗೆ ಯಾವುದೇ ಅಡ್ಡಿಯಿದ್ದಂತಿರಲಿಲ್ಲ. ಆದರೆ, ಹೊರಗಿನ ಯಾವುದೇ ಹೇರಿಕೆಯಷ್ಟೇ ಆಕೆಯ ಮನಸ್ಸಿನಲ್ಲೂ ಬೇರೂರಿರಬಹುದಾದ ಕಟ್ಟುಪಾಡುಗಳು ಆಕೆಯನ್ನು ಹಿಂಸೆಯ ಸಂಸಾರದಲ್ಲಿ ಬಂಧಿಸಿದ್ದವು.

'ಗಂಡಸರು ಯಾಕೆ ಹೀಗೆ ನಡೆದುಕೊಳ್ಳುತ್ತಾರೆ' ಎನ್ನುವುದು ಆ ಸಂದರ್ಭದಲ್ಲಿ, ನನ್ನ ಮನಸ್ಸಿಗೆ ಬಂದ ಇನ್ನೊಂದು ಪ್ರಶ್ನೆ. ಸ್ಮಿತಾಳನ್ನೂ ನಾನು ಈ ಪ್ರಶ್ನೆ ಕೇಳಿದೆ. ಅವಳ ವಿವರಣೆಯ ಪ್ರಕಾರ, ಅವನು ಮೊದಲಿನಿಂದಲೂ ಸ್ವಲ್ಪ ಸಿಟ್ಟಿನವನೇ ಆಗಿದ್ದ. ಈಕೆಯ ಫೋನ್ ನೋಡುವುದು, ಫೋನ್‌ಕಾಲ್‌ಗಳ ಬಗ್ಗೆ, ಮೆಸೇಜ್‌ಗಳ ಬಗ್ಗೆ ವಿಚಾರಿಸುವುದು, ಎಲ್ಲದರ ಬಗ್ಗೆ ಏನೋ ವ್ಯಂಗ್ಯ ನುಡಿಯುವುದು, ಎಲ್ಲೋ ಜೊತೆಗೆ ಹೋಗುತ್ತಿರುವಾಗ ಸಿಟ್ಟು ಬಂದರೆ ತಕ್ಷಣ ಕಾರ್ ನಿಲ್ಲಿಸಿ ಇವಳನ್ನು ಕಾರ್‌ನಿಂದ ಇಳಿಸುವುದು, ಕೆಲವು ಬಾರಿ ಕಪಾಳಕ್ಕೆ ಹೊಡೆದ ಪ್ರಸಂಗಗಳೂ ಇದ್ದವು. ಇತ್ತೀಚೆಗೆ ಕೆಲಸ ಕಳಕೊಂಡಿದ್ದ; ಮನೆಯಲ್ಲಿ ಕೂತು ಒಂದು ವರ್ಷದ ಮೇಲಾಗಿತ್ತು. ಕೆಲವು ತಿಂಗಳಿಂದ ಹೆಂಡತಿಯನ್ನು ಹಿಂಸಿಸುವ ಚಾಳಿ ಶುರುಹಚ್ಚಿದ್ದ. ಸ್ಮಿತಾ ತಾನೇ ದುಡಿಯುತ್ತಿದ್ದರೂ ಅವಳಿಗೆ ತನ್ನದೇ ಆದ ಬ್ಯಾಂಕ್ ಖಾತೆ ಇರಲಿಲ್ಲ. ಆಕೆ ದುಡಿದದ್ದೆಲ್ಲವನ್ನೂ ಅವನ ಜೊತೆಯ ಜಂಟಿಖಾತೆಯಲ್ಲಿ ಇಡಬೇಕೆಂಬುದು ಅವಳ ಗಂಡನ ತಾಕೀತು.

ನನ್ನ ಇನ್ನೊಬ್ಬಳು ಕಕ್ಷಿದಾರಳಾಗಿದ್ದ ಮಮತಾ, ಪುಟ್ಟ ದೇಹದ, ನಗುಮುಖದ ಹುಡುಗಿ. ಮದುವೆ ಫೋಟೊದಲ್ಲಿ ಅವಳು ಇನ್ನೂ ಚಂದ ಕಾಣಿಸುತ್ತಿದ್ದಳು. ಮದುವೆಯಾಗಿ ಎಂಟು ವರ್ಷವಾಗಿತ್ತು. ಆರು ವರ್ಷದ ಮಗಳಿದ್ದಳು. ಮುಖವೆಲ್ಲ ಇಳಿದುಹೋಗಿ, ಕಂಗಳಲ್ಲಿ ಕಾಂತಿ ಇಲ್ಲವಾಗಿತ್ತು. ಗಂಡ ತನ್ನ ಮೇಲೆ ನಡೆಸುವ ಹಿಂಸೆಯ ರೂಪಗಳನ್ನು ಒಂದೊಂದಾಗಿ ಅವಳು ಹೇಳುತ್ತಾ ಹೋದಂತೆ ನಾನು ತಲ್ಲಣಿಸಿಹೋದೆ.

ಯಾ ವಾ ಗ ಲೂ ಏನಾದರೊಂದು ನೆವ ಹೂಡಿ ಅವಳಿಗೆ ಹೊಡೆಯುವುದು, ಕಪಾಳಕ್ಕೆ ಬಾರಿಸುವುದು, ಉಗುರಿನಿಂದ ಪರಚುವುದು, ಹೀಗೆ ಮಾಡುತ್ತಲೇ ಇದ್ದ. ಅವನ ತಂದೆ, ತಾಯಿ ಅವರೊಂದಿಗೇ ಇದ್ದರು. ಅವರಿಗೆ ಇದು ಗಮನಕ್ಕೆ ಬಂದರೂ ಏನೂ ಹೇಳುತ್ತಿರಲಿಲ್ಲ; ಮಗನನ್ನು ತಡೆಯುತ್ತಿರಲಿಲ್ಲ. ವಾರಕ್ಕೆ ಎರಡು ಬಾರಿಯಾದರೂ ಮೊದಲನೇ ಮಹಡಿಯ ತಮ್ಮ ಕೋಣೆಗೆ ಅವಳನ್ನು ಕರೆದು ಅಲ್ಲಿ ಹೀಗೆ ಹಿಂಸೆ ಕೊಡುತ್ತಿದ್ದ. ಅವಳು ಬೇರೆ ಯಾವ ಗಂಡಸಿನೊಂದಿಗೆ ಮಾತನಾಡಿದರೂ ಅವಳಿಗೆ ಅವನೊಂದಿಗೆ ಸಂಬಂಧವಿದೆ ಎಂದು ಕಲ್ಪಿಸಿ, ಬಾರಿಸುತ್ತಿದ್ದ. ಪುಟ್ಟ ಮಗಳಿದ್ದರೂ ಅವಳೆದುರಿಗೂ ಹೆಂಡತಿಯನ್ನು ಹಿಂಸಿಸುತ್ತಿದ್ದ. ಮಗು ಅಳುತ್ತಿದ್ದರೂ ಮಮತಾಳಿಗೆ ಹೊಡೆಯುವುದು ನಡೆಯುತ್ತಿತ್ತು. ಒಮ್ಮೆ ಆ ಮಗುವನ್ನೂ ಹಾಸಿಗೆಯಿಂದ ಎಳೆದು ಬೀಳಿಸಿದಾಗ ತಡೆಯದೇ ವಕೀಲಳಾದ ನನ್ನನ್ನು ಹುಡುಕಿಕೊಂಡು ಬಂದಿದ್ದಳು. ಮಮತಾಳ ಗಂಡ ಸುಶಿಕ್ಷಿತ, ಕೆಲಸದಲ್ಲಿಯೂ ಇದ್ದ. ಮದುವೆಯ ಮೊದಲು ಕೆಲಸದಲ್ಲಿದ್ದ ಇವಳನ್ನು, ಕೆಲಸಕ್ಕೆ ಹೋಗುವುದು ಬೇಡ ಎಂದು ಮನೆಯಲ್ಲೇ ಇರಿಸಿದ್ದ.

ಇನ್ನೊಬ್ಬಳು ಚಿಕ್ಕ ವಯಸ್ಸಿನ ಉದ್ದ ಜಡೆಯ ಹುಡುಗಿ. ಪ್ರತಿಷ್ಠಿತ ಯುನಿವರ್ಸಿಟಿಯಲ್ಲಿ ಎಂ.ಎಸ್ಸಿ. ಪದವೀಧರೆ. ಒಬ್ಬ ಡಾಕ್ಟರ್‌ನನ್ನು ಮದುವೆಯಾಗಿ ದುಬೈಗೆ ಹೋಗಿದ್ದಳು. ಬಹಳ ಶ್ರೀಮಂತ ಮನೆತನವಾಗಿತ್ತು ಅದು. ಅಲ್ಲಿ ಗಂಡ, ಅವನ ತಂದೆ ತಾಯಿ ಇದ್ದರು. ಮದುವೆಯಾಗಿ ಹೋದ ದಿನದಿಂದಲೇ ಅವಳಿಗೆ ಮಾನಸಿಕ ಹಿಂಸೆ ಶುರುವಾಗಿತ್ತು. 'ವರದಕ್ಷಿಣೆ ಬೇಕಾದಷ್ಟು ಕೊಡಲಿಲ್ಲ', 'ನಿನಗಿಂತ ಸುಂದರ ಹುಡುಗಿ ಸಿಗುತ್ತಿದ್ದಳು', 'ನಿನಗೆ ಯಾವ ಅಡುಗೆಯೂ ಬರುವುದಿಲ್ಲ' —ಇನ್ನೂ ಏನೇನೋ. ಇವಳಿಗೆ ತಿನ್ನಲೂ ಸರಿಯಾಗಿ ಕೊಡುತ್ತಿರಲಿಲ್ಲ. ಇದನ್ನು ಗಂಡನಾದವನಿಗೆ ಹೇಳಿದರೆ ಅವನು, ಅವನ ತಂದೆ ತಾಯಿ ಮಾಡುತ್ತಿರುವುದು ಸರಿ ಎಂದು ಹೇಳಿಬಿಟ್ಟ. ಮಾತ್ರವಲ್ಲ, ಒಂದು ದಿನ ಎಲ್ಲರೂ ಸೇರಿ, 'ನಾವು ಒಂದು ವಹಿವಾಟು ಶುರು ಮಾಡಬೇಕೆಂದಿದ್ದೇವೆ. ಇನ್ನು ಒಂದು ವಾರದಲ್ಲಿ 25 ಲಕ್ಷ ರೂಪಾಯಿ ಹಣ ತರದಿದ್ದರೆ ನಿನಗೆ ದಿನದಲ್ಲಿ ಒಂದೇ ಹೊತ್ತು ಊಟ' ಎಂದರು. ಅದೇ ಸಮಯಕ್ಕೆ ಅವಳು ಬಸುರಿಯಾಗಿದ್ದಳು. ಅವರು ಕೊಡುತ್ತಿದ್ದ ಹಿಂಸೆಯಿಂದಾಗಿ ಅವಳ ಆರೋಗ್ಯ ತೀರಾ ಹದಗೆಟ್ಟಿತ್ತು. ಅನಾರೋಗ್ಯದ ಕಾರಣ ಹೇಳಿ ತಾಯಿ ಮನೆಗೆ ಬಂದ ಆ ಹುಡುಗಿ, 'ಇನ್ನು ನನ್ನನ್ನು



**ಬಾವಿಯಿಂದ ಜೀವಜಲವನ್ನು ಎತ್ತಿಕೊಡುವ ಹಗ್ಗವೇ ಕತ್ತಿಗೆ ಬಿಗಿದರೆ ಜೀವವನ್ನೂ ತೆಗೆಯುವಷ್ಟು ಕ್ರೂರಿಯೂ ಆಗಿಬಿಡಬಹುದಲ್ಲವೇ? ನೆಮ್ಮದಿಯ ತಾಣವೇ ಹಿಂಸೆಯ ಕೂಪವೂ ಆಗಿರುವ ಹತ್ತು ನೂರು ಸಾವಿರ ಉದಾಹರಣೆಗಳನ್ನು ನಮ್ಮ ಅಕ್ಕಪಕ್ಕದ ಮನೆಯ ಗೋಡೆಗಳೇ ಉಸುರುತ್ತವೆ.**